ಊ) ಉತ್ತರ ಕನ್ನಡ ಜಿಲ್ಲೆಯ ಅರಣ್ಯ ವಿಭಾಗಗಳಲ್ಲಿ 1995-96ನೇ ಸಾಲಿನ ಜುಲೈ ಅಂತ್ಯದವರೆಗೆ ಯೋಜನೆ ಹಾಗೂ ಯೋಜನೇತರ ಶೀರ್ಷಿಕೆಯಡಿಯಲ್ಲಿ ಖರ್ಚು ಮಾಡಿದ ಹಣದ ವಿವರವು ಈ ಕೆಳಕಂಡಂತಿವೆ.

	ವಿಭಾಗದ ಹೆಸರು	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ) ಯೋಜನೆ	ಯೋಜನೇತರ
1)	ಹಳಿಯಾಳ	21.34	68.20
2)	ಯಲ್ಲಾಪುರ	17.32	101.96
3)	ಕಾರವಾರ	14.43	98.67
4)	ಹೊನ್ನಾವರ	18.52	55.51
5)	ಸಿರ್ಸಿ	23.52	58.85
6)	ತಟ್ಟಿಹಳ್ಳ ಅರಣ್ಯ ತರಬೇತಿ ವಿಭಾಗ	1.02	0.53
7)	ಸಾಮಾಜಿಕ ಅರಣ್ಯ ವಿಭಾದ ಕಾರವಾರ	6.574	-
	ಒಟ್ಟು	102.724	383.720

ಯೋಜನೆ ಮತ್ತು ಯೋಜನೇತರ ಶೀರ್ಷಿಕೆಯಡಿಯಲ್ಲಿ ಖರ್ಚು ಮಾಡಿದ ಹಣವು ಹಳೇ ನೆಡುತೋಪುಗಳ ನಿರ್ವಹಣೆ, ಸಸಿಗಳ ನಿರ್ವಹಣೆ, ಹೊಸ ನೆಡುತೋಪು ನಿರ್ಮಾಣ, ವಾಹನ ನಿರ್ವಹಣೆ ಸಿಬ್ಬಂದಿ ವೇತನ ಮತ್ತು ಭತ್ಯ ಇತ್ಯಾದಿ ಬಾಬ್ತುಗಳನ್ನು ಒಳಗೊಂಡಿದೆ.

ಶ್ರೀ ವಿಶ್ವೇಶ್ವರ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಸದರಿ ಪ್ರಶ್ನೆಗೆ ಉತ್ತರಿಸಬೇಕಾದ ಮಾನ್ಯ ಅರಣ್ಯ ಸಚಿವರು ಇವತ್ತು ಸದನದಲ್ಲಿಲ್ಲ. ಈ ಪ್ರಶ್ನೆಯನ್ನು ಅವರ ಪರವಾಗಿ ಬೇರೆ ಸಚಿವರು ಉತ್ತರಿಸಿದರೆ, ಅವರಿಗೆ ಸೃಷ್ಟೀಕರಣವನ್ನೇನಾದರೂ ಕೇಳಿದರೆ 'ವಿಚಾರಿಸುತ್ತೇನೆ', 'ಪರಿಶೀಲಿಸುತ್ತೇನೆ', 'ಸೂಕ್ತವಾಗಿ ತಿಳಿಸುತ್ತೇನೆ' ಇತ್ಯಾದಿ ಉತ್ತರಗಳನ್ನು ನೀಡುತ್ತಾರೆ. ಮಾನ್ಯ ಅರಣ್ಯ ಸಚಿವರು ಸದನದಲ್ಲಿರುವ ದಿನ ನನಗೆ ಈ ಪ್ರಶ್ನೆಯನ್ನು ಕೇಳಲು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಹಾಗೇ ಆಗಲಿ. ಸದರಿ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ.

ಕೋರಮಂಗಲದಲ್ಲಿ ಕೆಂಪೇಗೌಡ ಒಳಾಂಗಣ ಕ್ರೀಡಾಂಗಣ ಕುರಿತು

2468 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೋರಮಂಗಲದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸುತ್ತಿರುವುದು ನಿಜವಲ್ಲವೇ?

ಆ) ಈ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುವುದು?

ಇ) *ಈ ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ'ರ ಹೆಸರನ್ನು ಇಡಲು ಸರ್ಕಾರ ಉದ್ದೇಶಿಸಿದೆಯೇ?*

ಶ್ರೀ ಅಜಯಕುಮಾರ್ ಸರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಹೌದು

ಆ) 1995ರ ನವೆಂಬರ್ ಮಾಹೆಯ ಅಂತ್ಯದೊಳಗಾಗಿ ಪೂರ್ಣಗೊಳ್ಳುವುದು.

ಇ) ಇಲ್ಲ

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಬೆಂಗಳೂರಿನ ಕೋರಮಂಗಲದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ'ರ ಹೆಸರನ್ನು ಇಡಲು ಉದ್ದೇಶಿಸಿದೆಯೇ? ಎಂದು ಪ್ರಶ್ನಿಸಿದ್ದೆ. ಅದಕ್ಕೆ ಸರ್ಕಾರದವರು 'ಇಲ್ಲ' ಎಂದು ಉತ್ತರಿಸಿದ್ದಾರೆ. ಈ ಕ್ರೀಡಾಂಗಣಕ್ಕೆ ಸದರಿ ಹೆಸರೇ ಇಡಲೇಬೇಕೆಂದು ನಾನು ಸನ್ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಅಜಯಕುಮಾರ್ ಸರ್ ನಾಯಕ್ : ಮಾನ್ಯ ಅಧ್ಯಕ್ಷರೇ, ಒಳಾಂಗಣ ಕ್ರೀಡಾಂಗಣಕ್ಕೆ 'ಕೆಂಪೇಗೌಡ'ರ ಹೆಸರನ್ನು ಇಡಬೇಕೆಂದು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಮೂರು ತಿಂಗಳ ಹಿಂದೆ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ. ಆಗಲೂ ಸಹ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಿರಿ. ಈಗಲೂ ಸಹ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಮೂರು ತಿಂಗಳಾದರೂ ಪರಿಶೀಲನೆಯಲ್ಲೇ ಇದ್ದರೆ ಹೇಗೆ? ಕೆಂಪೇಗೌಡರ ಹೆಸರನ್ನು ಕ್ರೀಡಾಂಗಣಕ್ಕೆ ಇಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ಇದರಲ್ಲಿ ನಿಮಗೆ ಏನು ತೊಂದರೆ ಇದೆ.

ಶ್ರೀ ಅಜಯಕುಮಾರ್ ಸರ್ ನಾಯಕ್ : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಕ್ರೀಡೆಗಳ ಸಲುವಾಗಿ ನಾವು ಬಹಳಷ್ಟು ಕ್ರೀಡಾಂಗಣಗಳನ್ನು ನಿರ್ಮಿಸುತ್ತಿದ್ದೇವೆ. ಯಾವ ಯಾವ ಕ್ರೀಡಾಂಗಣಗಳಿಗೆ ಯಾವ ಯಾವ ಹೆಸರುಗಳನ್ನು ಇಡಬೇಕು ಎಂಬ ಬಗ್ಗೆ ನಾವು ಇನ್ನೂ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಕೋರಮಂಗಲದ ಒಳಾಂಗಣ ಕ್ರೀಡಾಂಗಣಕ್ಕೆ ಕೆಂಪೇಗೌಡರ ಹೆಸರನ್ನು ಇಡಬೇಕೆಂದು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಅದನ್ನು ಕ್ರೀಡಾಂಗಣಗಳಿಗೆ ಹೆಸರುಗಳನ್ನು ಇಡುವಾಗ ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೆಲವು ಕಡೆ ಕಾಡಾನೆಗಳ ಹಾವಳಿ

2542 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಾಡಾನೆಗಳ ಹಾವಳಿಯಿಂದ ಕೃಷಿ ನಾಶವಾಗಿದ್ದು ಇದರಿಂದಾದ ನಷ್ಟವೆಷ್ಟು?*

ಆ) *ಈ ಬಗ್ಗೆ ರೈತರಿಗೆ ನೀಡಲಾಗುವ ಪರಿಹಾರದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ, ಈ ತನಕ ಪಾವತಿಸಿದ ಪರಿಹಾರದ ಮೊತ್ತವೆಷ್ಟು?*

ಇ) *ಕಾಡಾನೆಗಳ ಹಾವಳಿಯನ್ನು ನಿಲ್ಲಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :